ಇಂದು ದಿಃ 20.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಪಿ ಎಂ ಆರ್ ವಕೀಲರಿಂದ 9 ನೇ ಪ್ರತಿವಾದಿ ಪರವಾಗಿ.**

ಮಾಧವರಾವ ಮತ್ತು ಶಂಕರರಾವರವರು ಒಟ್ಟಿಗೆ ವ್ಯವಹಾರ ಮಾಡಿದ್ದಲ್ಲಿ , ಅವರಿಬ್ಬರು ಒಟ್ಟಿಗೆ ಜಂಟಿಯಾಗಿ ಸ್ವತ್ತುಗಳನ್ನು ಖರೀದಿಸುತ್ತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಇಲ್ಲ ಎಂದು ಉತ್ತರಿಸಿರುತ್ತಾರೆ. 1947 ರಲ್ಲಿ ಮಾಧವರಾವರವರು ತೀರಿಹೋದ ನಂತರ ಶಂಕರರಾವರವರು ಮಾಧವರಾವರವರಿಗೆ ಸೇರಿದ ಹಣ , ಬಂಗಾರ , ಬೆಳ್ಳಿ ಮತ್ತು ಇತರೆ ಬೆಲೆಬಾಳುವ ವಸ್ತುಗಳನ್ನು ಆಧರಿಸಿ ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.2 ಸ್ವತ್ತನ್ನು ಖರೀದಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಹಣದಿಂದಲೇ 13 ನೇ ಪ್ರತಿವಾದಿಯು ತನ್ನ ದೊಡ್ಡ ಮಗನ ಹೆಸರಿನಲ್ಲಿ ಇನ್ನೊಂದು ಆಸ್ತಿಯನ್ನು ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನು ಮಾಧವರಾವರವರು ಗಳಿಸಿದ ಹಣ

ಮತ್ತು ಬೆಲೆ ಬಾಳುವ ವಸ್ತುಗಳನ್ನು ಆಧರಿಸಿ ಖರೀದಿಸಿದ ಕಾರಣ ಸದರಿ ಸ್ವತ್ತುಗಳ ಮೇಲೆ ಮಾಧವರಾವರವರ ಕುಟುಂಬದವರಿಗೆ ಮಾತ್ರ ಹಕ್ಕು ಬರುತ್ತದೆ ಎಂದು ಹೇಳುವುದು ಸರಿಯಲ್ಲ ವಾದಪತ್ರದೊಂದಿಗೆ ಲಗತ್ತಿಸಿದ ಅನೆಕ್ಸರ್ ಬಿ ನಲ್ಲಿ ಕಾಣಿಸಿರುವ ಸ್ವತ್ತುಗಳ ನಂಬರ , ವಿಸ್ತೀರ್ಣ ಮತ್ತು ಅವುಗಳು ಇರುವ ಸ್ಥಳಗಳನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಸ್ವತ್ತುಗಳ ಚಕಬಂದಿಯನ್ನು ಸಹ ನನಗೆ ಹೇಳಲಾಗುವುದಿಲ್ಲ. ಸದರಿ ಸ್ವತ್ತುಗಳ ಚಕಬಂದಿಯನ್ನು ವಾದಪತ್ರದಲ್ಲಿ ಅಥವಾ ಅನೆಕ್ಸರ್ ಬಿ ನಲ್ಲಿ ಕಾಣಿಸಿರುವುದಿಲ್ಲ. ಸದರಿ ದಾವಾ ಸ್ವತ್ತುಗಳನ್ನು ಶಂಕರರಾವರವರು ಗಳಿಸಿದ್ದೇ ಆಗಿದ್ದಲ್ಲಿ , ಸದರಿ ಸ್ವತ್ತುಗಳ ಸಂಪೂರ್ಣ ಮಾಹಿತಿ ನನಗೆ ಇರುತ್ತಿತ್ತು ಎಂದು ಹೇಳುವುದು ಸರಿಯಲ್ಲ. ಸದರಿ ದಾವಾ ಸ್ವತ್ತುಗಳು ನಮಗೆ ಸಂಬಂಧಪಟ್ಟ ಸ್ವತ್ತುಗಳು ಅಲ್ಲದ ಕಾರಣ , ನನಗೆ ಅವುಗಳ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ ಎಂದು ಹೇಳುವುದು ಸರಿಯಲ್ಲ. 1955 ರಲ್ಲಿ ರೇಗೆ ಬ್ರದರ್ಸ ಜನರಲ್ ಮರ್ಚಂಟ್ ಪ್ರಾರಂಭವಾದಾಗ ಅದು ಪಾರ್ಟನರ್ಶಿಪ್ ಫರ್ಮ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಪಾರ್ಟನರ್ಗಳು ಸಕಾರಾಮ, ನಾರಾಯಣ, ಮಂಗೇಶ, ಜಗದೀಶ ಮತ್ತು ಶಾಂತಾರಾಮ ಆಗಿದ್ದರು ಎಂಬುದು ನನಗೆ ಗೊತ್ತಿಲ್ಲ. ಅವರೆಲ್ಲರೂ ಮಾಧವರಾವರವರ ಮಕ್ಕಳು. ನಂತರ ಸದರಿ ಪಾರ್ಟನರಶಿಪ್ ಫರ್ಮನ್ನು ಮುಕ್ತಾಯಗೊಳಿಸಿ ಅದನ್ನು ಪ್ರೋಪ್ರೈಟರ್ ಶಿಪ್ ಕನ್ಸರ್ನ ಆಗಿ ಮಾಡಿದರು, ಆ ನಂತರದಿಂದ ಅದು ಸಕಾರಾಮರವರ ಮಾಲಿಕತ್ವದ್ದಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆ ಸಂಸ್ಥೆಗಳ ನೋಂದಣಿ ಪತ್ರ ಆಗಿದ್ದು ಅದರಲ್ಲಿ ಶ್ರೀ ಸಕಾರಾಮ ಮಾಧವರಾವರ ರೇಗೆರವರನ್ನು ಮೆಸಸ್ ರೇಗೆ ಬ್ರದರ್ಸನ ಮಾಲಿಕರು ಎಂದು ಕಾಣಿಸಲಾಗಿದೆ. ಸಾಕ್ಷಿಯು ಸದರಿ ದಾಖಲೆಯಲ್ಲಿರುವ ಸಂಗತಿಯನ್ನು ಗುರುತಿಸಿದ ಕಾರಣ ಅದನ್ನು ನಿಡಿ-8 ಎಂದು ಗುರುತಿಸಲಾಯಿತು. ರೇಗೆ ಆಟೋಮೊಬೈಲ್ಸ ವರ್ಕ ಶಾಪ್ ನಾರಾಯಣರವರ ಹೆಸರಿನಲ್ಲಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ಅದನ್ನು ನಾರಾಯಣ,ಜಗದೀಶ ಮತ್ತು ಶಾಂತಾರಾಮ ನೋಡಿಕೊಳ್ಳುತ್ತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರೂ ಹಾಗೂ ಮಂಗೇಶ ಮತ್ತು ಅಜಯ ರೇಗೆ ಮತ್ತು ಸಂಜಯ ರೇಗೆ ಸಹ

ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸಿದ್ದಾರೆ. ಸದರಿ ವ್ಯವಹಾರದಿಂದ ಸಾಕಷ್ಟು ಆದಾಯ ಇತ್ತು ಎಂಬುದು ನನಗೆ ಗೊತ್ತಿಲ್ಲ. ಮೊದಲು ಶಂಕರರಾವರವರು ಕುಸ್ತಿ ಪಟ್ಟು ಆಗಿದ್ದರು, ನಂತರ ಮಾಧವರಾವರವರೊಂದಿಗೇ ಸ್ವೀಟಮಾರ್ ನಡೆಸುತ್ತಿದ್ದರು, ನಂತರ ಮಾಧವರಾವರವರೊಂದಿಗೆ ಟ್ರಾನ್ಸಪೋರ್ಟ ನಡೆಸುತ್ತಿದ್ದರು , ಈ ರೀತಿ ಅವರಿಗೆ ಆದಾಯ ಇತ್ತು. ಶಂಕರರಾವರವರು ಮಾಧವರಾವರವರೊಂದಿಗೆ ಸ್ವೀಟಮಾರ್ಟ ಹಾಗೂ ಟ್ರಾನ್ಸಪೋರ್ಟ ನಡೆಸುತ್ತಿದ್ದರು ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ಶಂಕರರಾವರವರು ಮಾಧವರಾವರವರೊಂದಿಗೆ ಸ್ವೀಟಮಾರ್ಟ ಹಾಗೂ ಟ್ರಾನ್ಸಪೋರ್ಟ ನಡೆಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಶಂಕರರಾವರವರಿಗೆ ಯಾವುದೇ ಆದಾಯ ಇರಲಿಲ್ಲ ಅವರು ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ , ಆ ಕಾರಣ ಮಾಧವರಾವರವರೇ ಶಂಕರರಾವರವರ ಕುಟುಂಬದ ಎಲ್ಲ ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ಹೇಳುವುದು ಸರಿಯಲ್ಲ. ಗೋಪಾಲಕೃಷ್ಣ ಮಂಗಲ ಕಾರ್ಯದಲ್ಲಿ ಶಂಕರರಾವ ಮತ್ತು ಮಾಧವರಾವರವರ ಕುಟುಂಬದವರು ಎರಡು ಕಟ್ಟಡಗಳನ್ನು ವಾಸಮಾಡಲು ಬಾಡಿಗೆಗೆ ತೆಗೆದುಕೊಂಡಿದ್ದರು. ಸರಸ್ವತಪುರದಲ್ಲಿ ಮನೆಯನ್ನು ಕಟ್ಟುವ ಸಮಯದಲ್ಲಿ ಮಾಧವರಾವರವರು ತೀರಿಕೊಂಡರು ಎಂದು ಹೇಳುವುದು ಸರಿಯಲ್ಲ. ಮಾಧವರಾವರವರು ತೀರಿಕೊಂಡ ನಂತರ ಶಂಕರರಾವರವರು ಮಾಧವರಾವ ಕುಟುಂಬದವರನ್ನು ನೋಡಿಕೊಳ್ಳುತ್ತಿದ್ದಾರೆ ಎಂಬ ಕಾರಣದಿಂದ ಮಾಧವರಾವರ ಮತ್ತು ಶಂಕರರಾವ ಎರಡು ಕುಟುಂಬಗಳು ಸರಸ್ವತ ಪುರದಲ್ಲಿ ಕಟ್ಟಿದ ಮನೆಗೆ ಸ್ಥಳಾಂತರಗೊಂಡರು. ಸರಸ್ವತಪುರದಲ್ಲಿರುವ ಮನೆಯನ್ನು ಸಹ ಮಾರುತಿ ಮೊಟರ್ಸ ನಿಂದ ಬಂದ ಆದಾಯದಿಂದಲೇ ಕಟ್ಟಿದ್ದು ಎಂಬುದು ನನಗೆ ಗೊತ್ತಿಲ್ಲ. ಮಾಧವರಾವರವರು ಮಕ್ಕಳು ಅಲ್ಪವಯಿಗಳಾದ ಕಾರಣ ಶಂಕರರಾವರವರು ಅವರ ಕೇರ್ ಟೇಕರ್ ಅದರು ಎಂಬುದು ನನಗೆ ಗೊತ್ತಿಲ್ಲ. ಶಂಕರರಾವರವರು ಮಾಧವರಾವರವರ ಮಕ್ಕಳ ಕೇರ್ ಟೇಕರ್ ಆದ ಆಧಾರದಲ್ಲಿ ಮಾಧವರಾವರವರಿಗೆ ಸಂಬಂಧಪಟ್ಟ ಸ್ವತ್ತುಗಳಲ್ಲಿ ಮಾಧವರಾವರವರ ಮಕ್ಕಳ ಹೆಸರುಗಳೊಂದಿಗೆ ತಮ್ಮ

ಹೆಸರುಗಳನ್ನು ಸಹ ದಾಖಲೆಗಳಲ್ಲಿ ದಾಖಲಿಸಿಕೊಂಡರು ಎಂದು ಹೇಳುವುದು ಸರಿಯಲ್ಲ. 1973 ರಲ್ಲಿ ಶಂಕರರಾವರವರು ತೀರಿಕೊಂಡರು. 1947 ರಲ್ಲಿ ಮಾಧವರಾವರು ತೀರಿಕೊಂಡ ನಂತರ ಅವರಿಗೆ ಸೇರಿದ ಸ್ವತ್ತುಗಳಿಂದ ಬರುವ ಆದಾಯವು ಶಂಕರರಾವರವರಿಗೆ ಬರುತ್ತಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿದ್ದಾರೆ. ನಿಮ್ಮ ಕುಟುಂಬದಲ್ಲಿ 13 ನೇ ಪ್ರತಿವಾದಿ ದೊಡ್ಡವರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅಲ್ಲ , 1 ನೇ ಪ್ರತಿವಾದಿ ದೊಡ್ಡವರು ಎಂದು ಉತ್ತರಿಸಿದ್ದಾರೆ. 13 ನೇ ಪ್ರತಿವಾದಿಯು ಬಿ.ಎ ಎಲ್ ಎಲ್ ಬಿ ಪದವಿಧರರಾಗಿದ್ದರು. 1 ನೇ ಪ್ರತಿವಾದಿ 5 ಅಥವಾ 7 ನೇ ತರಗತಿ ಓದಿದ್ದರು ಎಂಬುದು ನನಗೆ ಗೊತ್ತಿಲ್ಲ. ಶಂಕರರಾವರವರ ಹೆಸರು ಮಾಧವರಾವರವರ ಸ್ವತ್ತುಗಳಲ್ಲಿ ದಾಖಲಾದ ವಿಷಯ ಮಾಧವರಾವರವರ ಮಕ್ಕಳಿಗೆ ಗೊತ್ತಿರಲಿಲ್ಲ ಎಂದು ಹೇಳುವುದು ಸರಿಯಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ಶಂಕರರಾವರವರ ಹೆಸರು ಮಾಧವರಾವರವರ ಸ್ವತ್ತುಗಳಲ್ಲಿ ದಾಖಲಾದ ವಿಷಯ ಮಾಧವರಾವರವರ ಮಕ್ಕಳ ಗಮನಕ್ಕೆ ಬಂದಿತು ಎಂದು ಹೇಳುವುದು ಸರಿಯಲ್ಲ. ಯಾವುದೇ ಅವಿಭಕ್ತ ಕುಟುಂಬದ ವ್ಯವಹಾರ ಮತ್ತು ಆಸ್ತಿಗಳು ಇಲ್ಲದೇ ಇದ್ದರೂ ಸಹ , ಶಂಕರರಾವರವರು ಮಾಧವರಾವರವರ ಮಕ್ಕಳಿಗೆ ಮಾಧವರಾವರವರ ಸ್ವತ್ತುಗಳು ಹಾಗೂ ವ್ಯವಹಾರ ಒಟ್ಟು ಕುಟುಂಬದ ವ್ಯವಹಾರ ಮತ್ತು ಸ್ವತ್ತುಗಳಾಗಿವೆ ಎಂದು ಹೇಳಿ ಬೆಳೆಸಿದ್ದರು ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿ ನನ್ನ ಖಾಸ ದೊಡ್ಡ ಅಣ್ಣ. ಶಂಕರರಾವರವರ ನಿಧನದ ನಂತರ , ಮಾಧವರಾವರವರಿಗೆ ಸೇರಿದ ಸ್ವತ್ತುಗಳು ಮತ್ತು ವ್ಯವಹಾರ ಒಟ್ಟು ಕುಟುಂಬದ್ದು ಎಂದು ತಪ್ಪಾದ ಮಾಹಿತಿ ನೀಡಿ 13 ನೇ ಪ್ರತಿವಾದಿಗೆ ಪಾವರ್ ಆಫ್ ಅಟಾರ್ನಿ ಬರೆದುಕೊಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಪಾವರ ಆಫ್ ಅಟಾರ್ನಿಯನ್ನು 1975 ರಲ್ಲಿ ಮಾಡಿದ್ದು , ಅದಕ್ಕೆ ನಾನು ಸಹ ಸಹಿ ಮಾಡಿದ್ದೇನೆ ಎಂಬುದು ಈಗ ನನಗೆ ನೆನಪಿಲ್ಲ. ಶಂಕರರಾವರವರು ತೀರಿಹೋದ ನಂತರ ಸದರಿ ಪಾವರ ಆಫ್ ಆಟಾರ್ನಿ ಆಧಾರದಲ್ಲಿ 13 ನೇ ಪ್ರತಿವಾದಿ ಬಾಡಿಗೆ ಹಣವನ್ನು ಪಡೆದುಕೊಳ್ಳುತ್ತಿದ್ದರು ಎಂದು ಹೇಳುವುದು ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ 1975 ರ ಪಾವರ್ ಆಫ್ ಅಟಾರ್ನಿಯಾಗಿದ್ದು ಅದರಲ್ಲಿ ನನ್ನ ಸಹಿ ಇದೆ.

ಸಾಕ್ಷಿಯು ಗುರುತಿಸಿದ ಪಾವರ ಆಫ್ ಅಟಾರ್ನಿಯನ್ನು ನಿಡಿ-9 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಡಿ-9(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ.ಹಾಗೂ ಸಿಜೆಎಂ,
ಧಾರವಾಡ.